ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನಲ್ಲಿ ರಾಷ್ಟ್ರೀಯ ಸೇವಾ ಯೋಜನೆವತಿಯಿಂದ ಇಂಗ್ಲಿಷ್ ವಿಭಾಗದ ಸಹಯೋಗದಲ್ಲಿ ಹಮ್ಮಿಕೊಂಡಿದ್ದ

## 'ಉಚಿತ ಇಂಗ್ಲಿಷ್ ಪರಿಹಾರ ಬೋಧನೆ'

## ಉದ್ಘಾಟನಾ ಸಮಾರಂಭ

ಮೈಸೂರು : ಕಲಿಕೆಯಲ್ಲಿ ಹಿಂದುಳಿದ ಹಾಗೂ ನಪಾಸಾದ ವಿದ್ಯಾರ್ಥಿಗಳಿಗೆ 'ಇಂಗ್ಲಿಷ್ ಪರಿಹಾರ ಬೋಧನೆ'ಯ ಉಚಿತ ತರಗತಿಗಳು ಸಂಜೀವಿನಿಯಂತೆ ನೆರವಾಗಲಿವೆ ಎಂದು ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನ ಇಂಗ್ಲಿಷ್ ವಿಭಾಗದ ಮುಖ್ಯಸ್ಥ ಪ್ರೊ.ಕೆ.ಸಿ.ಸೋಮಣ್ಣ ಅಭಿಪ್ರಾಯಪಟ್ಟರು.

ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನಲ್ಲಿ ರಾಷ್ಟ್ರೀಯ ಸೇವಾ ಯೋಜನೆವತಿಯಿಂದ ಇಂಗ್ಲಿಷ್ ವಿಭಾಗದ ಸಹಯೋಗದಲ್ಲಿ ಹಮ್ಮಿಕೊಂಡಿದ್ದ 'ಉಚಿತ ಇಂಗ್ಲಿಷ್ ಪರಿಹಾರ ಬೋಧನೆ' ತರಗತಿಗಳ ಉದ್ಘಾಟನಾ ಸಮಾರಂಭದಲ್ಲಿ ಪ್ರಧಾನ ಭಾಷಣಕಾರರಾಗಿ ಮಾತನಾಡಿದ ಅವರು, ಸ್ಪರ್ಧಾತ್ಮಕ ಯುಗದಲ್ಲಿ ಇಂಗ್ಲಿಷ್ ಕಲಿಕೆ ಮತ್ತು ಸರಿಯಾದ ಬಳಕೆ ಪ್ರತಿಯೊಬ್ಬರಿಗೂ ಅಗತ್ಯ ಎಂದರು.



ಪರಿಹಾರ ಬೋಧನೆಯು ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿನಿಯರಿಗೆ ತುಂಬಾ ಅವಶ್ಯಕ. ಇದು ಅವರಲ್ಲಿ ಆತ್ಮವಿಶ್ವಾಸ ಹೆಚ್ಚಿಸುವುದಲ್ಲದೆ ಇತರೆ ಮಕ್ಕಳ ಮಟ್ಟಕ್ಕೆ ಏರಲು ನರವಾಗುತ್ತದೆ. ಕಲಿಕೆಯಲ್ಲಿ ಹಿಂದಿರುವ ಕಾಲೇಜಿನ ಬಡ, ಹಿಂದುಳಿದ ವರ್ಗದ ಮಕ್ಕಳು ಬೇರೆಕಡೆ ಹಣಕೊಟ್ಟು ಕಲಿಯಲು ಕಷ್ಟವಾಗುತ್ತದೆ. ಈ ನಿಟ್ಟಿನಲ್ಲಿ ರಾಸೇಯೋ ವತಿಯಿಂದ ಕಾಲೇಜಿನಲ್ಲಿಯೇ 'ಇಂಗ್ಲಿಷ್ ಪರಿಹಾರ ಬೋಧನೆ' ತರಗತಿಯನ್ನು ಉಚಿತವಾಗಿ ಆಯೋಜಿಸಿರುವುದು ಉತ್ತಮ ಪ್ರಯತ್ನ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಇಂಗ್ಲಿಷ್ ವ್ಯವಹಾರಿಕ ಭಾಷೆಯಾಗಿದೆ. ಇಂಗ್ಲಿಷ್ ಪತ್ರಿಕೆಗಳನ್ನು ಓದುವುದರಿಂದ, ಇಂಗ್ಲಿಷ್ ನ್ಯೂಸ್ ಕೇಳುವುದರಿಂದ ಹಾಗೂ ಬೇರೆಯವರು ಮಾತನಾಡುವುದನ್ನು ಸರಿಯಾಗಿ ಗಮನಿಸುವುದರಿಂದ ಇಂಗ್ಲಿಷ್ ಕಲಿಯಲು ಸಹಕಾರಿಯಾಗುತ್ತದೆ. ಸರಿಯಾದ ಉಚ್ಚಾರಣೆ ಮತ್ತು ಓದಿನಿಂದ ಇಂಗ್ಲಿಷ್ ಕಲಿಯಬಹುದು. ಈ ನಿಟ್ಟಿನಲ್ಲಿ ಪ್ರತಿಯಬ್ಬ ವಿದ್ಯಾರ್ಥಿಯೂ ಪ್ರಯತ್ನಶೀಲರಾಗಬೇಕು ಎಂದು ಸಲಹೆ ನೀಡಿದರು.

ಪ್ರಾಂಶುಪಾಲ ಡಾ.ಅಣ್ಣೇಗೌಡ ಅಧ್ಯಕ್ಷತೆವಹಿಸಿ ಮಾತನಾಡಿ, ವಿದ್ಯಾರ್ಥಿಗಳಿಗೆ ಇಂಗ್ಲಿಷ್ ಭಾಷೆಯ ಹಿಡಿತ ಬಹಳ ಮುಖ್ಯ. ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಇಂಗ್ಲಿಷ್ ಕಡ್ಡಾಯವಾಗಿರುತ್ತದೆ. ಆದ್ದರಿಂದ ನಮ್ಮ ಕಾಲೇಜಿನಲ್ಲಿ ರಾಸೇಯೋ ಆಯೋಜಿಸಿರುವ 'ಇಂಗ್ಲಿಷ್ ಪರಿಹಾರ ಬೋಧನೆ' ತರಗತಿಗಳ ಪ್ರಯೋಜನ ಪಡೆದುಕೊಳ್ಳಬೇಕು ಎಂದು ಸಲಹೆ ನೀಡಿದರು.

ರಾಸೇಯೋ ಕಾರ್ಯಕ್ರಮಾಧಿಕಾರಿ ಡಾ.ಕಂಚಿನಕೆರೆ ಗೋವಿಂದೇಗೌಡ ಪ್ರಾಸ್ತಾವಿಕವಾಗಿ ಮಾತನಾಡಿ, ಕಾಲೇಜಿನಲ್ಲಿ ಗ್ರಾಮೀಣ ಪ್ರದೇಶದ ಹಿಂದುಳಿದ ವರ್ಗದ ಮಕ್ಕಳ ಸಂಖ್ಯೆ ಹೆಚ್ಚಿದೆ. ಕನ್ನಡ ಮಾಧ್ಯಮದವರೂ ಇದ್ದಾರೆ. ಈ ಮಕ್ಕಳಿಗೆ ಇಂಗ್ಲಿಷ್ ಎಂದರೆ ಎಲ್ಲಿಲ್ಲದ ಭಯ. ಕಳೆದ ಸೆಮಿಸ್ಟರ್‌ಗಳಲ್ಲಿ ಫೇಲಾದವರು ಹಾಗೂ ಪ್ರಸಕ್ತ 1 ಮತ್ತು 3ನೇ ಸೆಮಿಸ್ಟರ್‌ಗಳಲ್ಲಿ ಇಂಗ್ಲಿಷ್ ಕಲಿಕೆಯಲ್ಲಿ ಹಿಂದುಳಿದವರಿಗೆ ಅವರ ಇಂಗ್ಲಿಷ್ ಸಾಮರ್ಥ್ಯ ವೃದ್ಧಿಸಲು ಉಚಿತ 'ಇಂಗ್ಲಿಷ್ ಪರಿಹಾರ ಬೋಧನೆ' ತರಗತಿಗಳನ್ನು ಆಯೋಜಿಸಲಾಗಿದೆ ಎಂದು ವಿವರಿಸಿದರು.

ಸಮಾರಂಭದಲ್ಲಿ ಎಲ್ಲ ಸಮಿತಿಗಳ ಪ್ರಧಾನ ಸಂಯೋಜಕ ಪ್ರೊ.ಎಂ.ಶಿವಣ್ಣ, ಅಧ್ಯಾಪಕ ಕಾರ್ಯದರ್ಶಿ ಪ್ರೊ.ಸೋಮಣ್ಣ, ಸಾಂಸ್ಕೃತಿಕ ಸಮಿತಿ ಕಾರ್ಯದರ್ಶಿ ಪ್ರೊ.ಪಿ.ಶಿವಣ್ಣ, ಇಂಗ್ಲಿಷ್ ಸಹ ಪ್ರಾಧ್ಯಾಪಕ ಪ್ರೊ.ಎಸ್.ಆದಿಶೇಷ ಹಾಜರಿದ್ದರು. ರಾಸೇಯೋ ಅಧಿಕಾರಿ ಪ್ರೊ.ರೇಖಾಮ್ಯಾಥ್ಯೂ ಸ್ವಾಗತಿಸಿದರು. ವಿದ್ಯಾರ್ಥಿ ಸಂಘದ ಅಧ್ಯಕ್ಷೆ ಕು.ಕೆ.ಸೌಮ್ಯ ನಿರೂಪಣೆ ಮಾಡಿದರು. ಕು.ಕೋಮಲ ಪ್ರಾರ್ಥನೆ ಮಾಡಿದರು.